# ಎನ್‌ಐಟಿಕೆ ನಿರ್ದೇಶಕರಾಗಿ ಪ್ರೊ.ಭಲ್ಲಮುಡಿ ರವಿ



■ **ವಿಕ ಸುದ್ದಿಲೋಕ** ಮಂಗಳೂರು

ಸುರತ್ಕಲ್ ಎನ್‌ಐಟಿಕೆ ನಿರ್ದೇಶಕರನ್ನಾಗಿ ಪ್ರೊ.ಭಲ್ಲಮುಡಿ ರವಿ ಅವರನ್ನು ಕೇಂದ್ರ ಶಿಕ್ಷಣ ಸಚಿವಾಲಯ ನೇಮಕ ಮಾಡಿದೆ.

ಗುರುವಾರ ಎನ್‌ಐಟಿಕೆಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಹೆಚ್ಚುವರಿ ಪ್ರಭಾರ ನಿರ್ದೇಶಕರಾಗಿದ್ದ ಕ್ಯಾಲಿಕಟ್ ಎನ್‌ಐಟಿಯ ನಿರ್ದೇಶಕ ಪ್ರೊ.ಪ್ರಸಾದ್‌ಕೃಷ್ಣ ಅವರು ನೂತನ ನಿರ್ದೇಶಕ ಪ್ರೊ.ಭಲ್ಲಮುಡಿ ರವಿ ಅವರಿಗೆ ಅಧಿಕಾರ ಹಸ್ತಾಂತರಿಸಿದರು.

ಪ್ರೊ.ಬಿ.ರವಿ ಅವರು ಇದಕ್ಕೆ ಮೊದಲು ಮುಂಬಯಿ ಐಐಟಿಯಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್‌ನ ಇನ್‌ಸ್ಟಿಟ್ಯೂಟ್ ಚೇರ್ ಪ್ರೊಫೆಸರ್ ಆಗಿದ್ದರು. ಅವರು ರೂರ್ಕೆಲಾ ಎನ್‌ಐಟಿಯ ಹಳೆ ವಿದ್ಯಾರ್ಥಿ ಮತ್ತು ಬೆಂಗಳೂರಿನ ಐಐಎಸ್ಸಿಯಲ್ಲಿ ಸ್ನಾತಕೋತ್ತರ ಮತ್ತು ಪಿಎಚ್‌ಡಿ ಪದವಿ ಪೂರ್ಣಗೊಳಿಸಿದ್ದಾರೆ.

Vijaya Karnataka, Date: 16/06/23, p,no -02